ಓ ಎಸ್ ನಂಃ 5/2015

ಪಿ.ಡಬ್ಲ್ಯೂ ಃ 1

ದಿನಾಂಕ 19-08-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ</u>

ದಾವಾ ಆಸ್ತಿಗಳ ಭಾಗಾಂಶಕ್ಕಾಗಿ ಕೇಸು ಹಾಕಿದ್ದೇನೆ. ಸರ್ವೆ ನಂ.4/20, 4/26, 4/98, 9/7, 9/4, 9/5, 17 ಇವುಗಳಿಗೆ ಕೇಸು ಹಾಕಿದ್ದೇನೆ. ದಾವಾ ಆಸ್ತಿಗಳು ನನ್ನ ಅಜ್ಜ ಸತ್ತಪ್ಪನ ಹೆಸರಿನಲ್ಲಿದೆ. ನನ್ನ ಅಜ್ಜ, ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರ ಹೆಸರಿನಲ್ಲಿ ಆಸ್ತಿ ಇರುವುದನ್ನು ತೋರಿಸಲು ಪಹಣಿ ಹಾಜರುಪಡಿಸಿದ್ದೇನೆ. ನನ್ನ ಹೆಸರಿನಲ್ಲಿ ಸರ್ವೆ ನಂ.162 ಮತ್ತು 163 ರ ಪಹಣಿ ನನ್ನ ಹೆಸರಿನಲ್ಲಿದೆ. ನನ್ನ ಹೆಸರಿನಲ್ಲಿರುವ ಪಹಣಿಗಳು ವಿಭಾಗ ಮೂಲಕ ಬಂದಿದೆ ಎಂದರೆ ಸರಿಯಲ್ಲ. ನಾವೆಲ್ಲ ಬೇರೆ ಬೇರೆ ವಾಸ ಇದ್ದೇವೆ ಎಂದರೆ ಸರಿಯಲ್ಲ, ಒಟ್ಟಾಗಿ ಇದ್ದೇವೆ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಜಗಳವಾದ ನಂತರ ಬೇರೆ ಮನೆ ಕಟ್ಟಿಕೊಂಡು ವಾಸ ಇದ್ದೇನೆ. ನಮ್ಮ ಒಟ್ಟು ಕುಟುಂಬಕ್ಕೆ ಸಂಬಂದಪಟ್ಟಂತೆ ವಾಸದ ಮನೆ ಇರುವುದಿಲ್ಲ.

ನಾನು ಈಗ ವಾಸ ಇರುವ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ, ಕಾರಣ ಅದು ನನ್ನದ್ದಲ್ಲ. ದಾವಾ ಐಟಂ ನಂ.1 ನ್ನು 1 ನೇ ಪ್ರತಿವಾದಿ ತಿಮ್ಮಪ್ಪರವರಿಂದ 1993 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆಸ್ತಿ. ಒಟ್ಟು ಕುಟುಂಬದ

ಆಸ್ತಿಗಳನ್ನು 1992 ರಲ್ಲಿ ನಾವು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿಭಾಗವಾದ ನಂತರ 1 ನೇ ಪ್ರತಿವಾದಿ ದಾವಾ ಐಟಂ ನಂ.1 ರ ಆಸ್ತಿಯನ್ನು ಖರೀದಿಸಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 1992 ರ ವಿಭಾಗದಲ್ಲಿ 1 ನೇ ಪ್ರತಿವಾದಿಗೆ ದಾವಾ ಐಟಂ ನಂ.3 ರಲ್ಲಿ 27 ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಸರ್ವೆ ನಂ.9/7 ರಲ್ಲಿ ನನ್ನ ಹೆಸರಿಗೆ 27 ಗುಂಟೆ ಪಹಣಿ ಇದೆ ಎಂದರೆ ನಿಜ, ಅದನ್ನು ಯಾರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.5 ಮತ್ತು 10 ರಲ್ಲಿ ನನಗೂ ಮತ್ತು 1 ನೇ ಪ್ರತಿವಾದಿಗೂ ತಲಾ 27 ಗುಂಟೆ ವಿಭಾಗ ಬಂದಿದೆ ಎಂದರೆ ಸರಿಯಲ್ಲ. ಅದರಂತೆ ನನ್ನ ಹೆಸರಿಗೆ ಪಹಣಿಗಳು ಇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ಮತ್ತು 6 ರ ಆಸ್ತಿಯನ್ನು 1 ನೇ ಪ್ರತಿವಾದಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎಂದರೆ ನಿಜ, ಆದರೆ ಅದನ್ನು ಒಟ್ಟು ಕುಟುಂಬಕ್ಕೆ ಕೊಟ್ಟಿದ್ದಾರೆ. ದಾವಾ ಐಟಂ ನಂ.4 ಮತ್ತು 6 ರ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.1, 4 ಮತ್ತು 6 ರ ಆಸ್ತಿಗಳ ಮೇಲೆ 1 ನೇ ಪ್ರತಿವಾದಿಯನ್ನು ಹೊರತು ಪಡಿಸಿ ನನಗಾಗಲಿ ಅಥವಾ ಇತರೇ ಯಾವುದೇ ಪ್ರತಿವಾದಿಗಳಿಗಾಗಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ಮತ್ತು 6 ರ ಆಸ್ತಿಗಳನ್ನು ಮಂಜೂರು ಮಾಡಿದ ಕಾಲದಿಂದಲೂ 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ರಲ್ಲಿ ಇಂದಿಗೂ ವಿಭಾಗವಾಗಿಲ್ಲ ಎಂದರೆ ನಿಜ. ಸದರಿ ಆಸ್ತಿಯಲ್ಲಿ ಎಲ್ಲಾರೂ ಜಂಟಿ ಸ್ವಾಧೀನ ಇದ್ದೇವೆ ಎಂದರೆ ನಿಜ. ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿಗೂ ವಿಭಾಗ ಬರಬೇಕು ಎಂದರೆ ನಿಜ. ದಾವಾ ಐಟಂ ನಂ.8 ರ ಆಸ್ತಿಯನ್ನು 3 ನೇ ಪ್ರತಿವಾದಿಯಾದ ಸಗಣಿ ರಂಗಪ್ಪ 6 ನೇ ಪ್ರತಿವಾದಿಯಾದ ಗೋವಿಂದಪ್ಪರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ಅದು ಪೋರ್ಜರಿಯಾಗಿದೆ. ಸದರಿ ಆಸ್ತಿಯಲ್ಲೂ ಸಹ 1 ನೇ ಪ್ರತಿವಾದಿಗೆ ಹಕ್ಕು ಇದೆ ಎಂದರೆ ನಿಜ. ದಾವಾ ಐಟಂ ನಂ.7 ರ ಆಸ್ತಿ ಇನ್ನೂ ವಿಭಾಗವಾಗಿಲ್ಲ ಎಂದರೆ ನಿಜ. ದಾವಾ ಐಟಂ ನಂ.2, 7 ಮತ್ತು 8 ರಲ್ಲಿ ಮಾತ್ರ ವಿಭಾಗವಾಗಬೇಕಾಗಿದೆ ವಿನಃ ಉಳಿದ ಆಸ್ತಿಗಳಲ್ಲಿ ಈಗಾಗಲೇ ವಿಭಾಗವಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.